**<u>ಮೆಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ</u>**

**<u>ಮುಧೋಳ</u>**

CC.No.1529/2022

CW2/PW1

| | |
|---|---|
| ಹೆಸರು | ಸಂಜು ಕುರಿ |
| ತಂದೆಯ ಹೆಸರು | ಸರ್ಕಾರ |
| ವಯಸ್ಸು | 36 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮುಧೋಳ |

**ದಿನಾಂಕಃ 12-12-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆಃ- ಎ ಪಿ ಪಿ ರವರಿಂದ.</u>**

ಪೋಲಿಸರು ನನ್ನ ಪಂಚರಾಗುವಂತೆ ಕೇಳಿಕೊಂಡಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚಾನಾಮೆ ಜರುಗಿಸಿಲ್ಲ.

ಈಗ ತೋರಿಸುತ್ತಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸದರಿ ಪಂಚನಾಮೆಯಲ್ಲಿ ಏನು ಬರೆದಿದೆ ಗೊತ್ತಿಲ್ಲ.

ಈಗ ತೋರಿಸುತ್ತಿರುವ ಭಾವಚಿತ್ರಗಳನ್ನು ಎಲ್ಲಿ ಮತ್ತು ಯಾವ ಕಾರಣಕ್ಕೆ ತೆಗೆಯಲಾಗಿದೆ ಗೊತ್ತಿಲ್ಲ. ಸದರಿ ಭಾವಚಿತ್ರಗಳನ್ನು ನಿಪಿ-2 ರಿಂದ 4 ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಜಪ್ತುಮಾಡಿಕೊಂಡಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟಿ ಸವಾಲು- ಎ ಪಿ ಪಿ ರವರಿಂದ.</u>**

ದಿನಾಂಕ 10.07.2022 ರಂದು ಮುಧೋಳ ಪೋಲಿಸರು ನನ್ನನ್ನು ಮತ್ತು ಚಾಸಾ-3 ರವರನ್ನು ಪಂಚರಾಗುವಂತೆ ಕರೆದಿದ್ದರು ಎಂದರೆ ಸರಿ.

ಮಂಟೂರ ಗ್ರಾಮದ ಬೈಪಾಸ ರಸ್ತೆಯ ಹತ್ತಿರ ಅಪಘಾತವಾಗಿತ್ತು ಅಲ್ಲಿಗೆ ನಮ್ಮನ್ನು ಕರೆದಿದ್ದರು ಎಂದರೆ ಸರಿ.

ಚಾಸಾ-8 ರವರು ಅಪಘಾತವಾದ ಸ್ಥಳವನ್ನು ತೋರಿಸಿದರು ಎಂದರೆ ಸರಿ.

ಅಪಘಾತಕ್ಕಿಡಾದ ಟ್ರ್ಯಾಕ್ಟರ ಮತ್ತು ಟ್ರೇಲರಗಳು ಅಪಘಾತವಾದ ಸ್ಥಳದಲ್ಲಿ ಇದ್ದವು ಎಂದರೆ ಸರಿ.

ಟ್ರ್ಯಾಕ್ಟರ ನಂ. KA 47 D-5774 ಎಂದರೆ ಸರಿ.

ಪಂಚನಾಮೆ ಜರುಗಿಸಿದ ನಂತರ ಪೋೀಲಿಸರು ಟ್ರಾಕ್ಟಕರ ಮತ್ತು ಟ್ರೇಲರಗಳನ್ನು ಜಪ್ತಿ ಮಾಡಿಕೊಂಡು ಹೋದರು ಎಂದರೆ ಸಾಕ್ಷಿ ಅದು ಏನು ನನಗೆ ಗೊತ್ತಿಲ್ಲ ಆದರೆ ನನ್ನ ಸಹಿ ಮಾತ್ರ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಪಂಚನಾಮೆಯಲ್ಲಿರುವ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿತ ಪರ ಶ್ರೀ ಎ.ಎಮ.ಕೆ ವಕೀಲರಿಂದಃ</u>**

ಅಪಘಾತ ಇದೆ ಸ್ಥಳದಲ್ಲಿ ಆಗಿದೆ ಎ್ಧದು ನನ್ನ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿ.

ನಿಪಿ-2 ರಿಂದ 4 ರ ಭಾವಚಿತ್ರಗಳಲ್ಲಿರುವ ವಾಹನಗಳಿಂದಲೆ ಅಪಘಾತವಾಗಿದೆ ಎಂದು ಹೇಳಲು ನನಗೆ ಮಾಹಿತಿ ಇಲ್ಲ ಎಂದರೆ ಸರಿ.

ಅಪಘಾತ ಹೇಗಾಯಿತು ಮತ್ತು ಯಾರ ತಪ್ಪಿಂದ ಆಯಿತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ.

ನನ್ನ ಸಮಕ್ಷಮ ಯಾವುದೆ ಟ್ರ್ಯಾಕ್ಟರ ಮತ್ತು ವಾಹನಗಳನ್ನಾಗಿ ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿ.

ನಿಪಿ-1 ರಲ್ಲಿರುವ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ ಮತ್ತು ಯಾರು ನನಗೆ ಓದಿ ಹೇಳಿಲ್ಲ ಎಂದರೆ ಸರಿ.

ಪೋಲಿಸು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಅಷ್ಟೆ, ನನಗೆ ಅಪಘಾತ ಮತ್ತು ಪಂಚನಾಮೆ ಕುರಿತು ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ